ಶ್ರೀ ಕೆ. ಪಿ. ಚಿಕ್ಕೇಗೌಡ.—ನ್ಯಾಯ, ನನ್ನ ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, ಸುಮಾರು 5-6 ವರ್ಷಗಳ ಹಿಂದೆಯೆ ಆ ಸೇತುವೆಯು ಎಸ್ಟಿಮೇಟು ಮಂಜೂರಾಗಿ ಅದನ್ನು ಕಟ್ಟತಕ್ಕ ವಿಷಯದಲ್ಲಿ ಸ್ಥಳದ ವ್ಯವಹಾರದಿಂದ ಅದು ನಿಂತುಹೋಗಿದೆ ಎಂಬುದು ತಮಗೆ ಗೊತ್ತಿದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವ ಹಾಗೆ ಆ ಸೇತುವೆಯು ಎಸ್ಟಿಮೇಟು ತಯಾರಾಗಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಆ ಸೇತುವೆಯ ಬಗ್ಗೆ ಸರ್ಕಾರದವರು ಏನು ಯೋಚನೆ ಮಾಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿಯವರೆಗೂ ಸರ್ಕಾರದವರು ಆ ಸೇತುವೆಯನ್ನು ಕಟ್ಟಬೇಕೆಂದು ವಿಚಾರ ಮಾಡಿಲ್ಲ.

Removal of Stones from the Quarry

19. Sri N. G. HALAPPA (Channagiri).—

Will the Minister for Public Works be pleased to state :—

(*a*) whether any progress has been made to obtain information in respect of the quarry from which the Stones were removed since their replies to starred Question No. 377 during First Session 1967 ;

(*b*) if so, the quarry from which the Stones were removed ?

A.—Sri VEERENDRA PATIL (Minister for Public Works).—

(*a*) There is no record available to show the quarry from which the stones were brought.

(*b*) Does not arise in view of reply to clause (*a*) above.

ಶ್ರೀ ಎನ್. ಜಿ. ಹಾಲಪ್ಪ.—ಒಂದು ವರ್ಷವಾದರೂ ಕೂಡ ಕಲ್ಲುಗಳನ್ನು ಯಾವ ಕಲ್ಲಿನ ಗಣಿಯಿಂದ ತರಲಾಯಿತು ಎಂಬುದನ್ನು ನೂಚಿಸುವ ಬಗ್ಗೆ ಯಾವ ದಾಖಲೆಯೂ ದೊರೆಯುವಂತಿಲ್ಲ ಎಂದು ಹೇಳಿದ್ದೀರಿ. ಈ ಸರ್ಕಾರದ ರೀತಿ ನೀತಿಯಲ್ಲಿ ಇದಕ್ಕೆ ಏನಾದರೂ ಒಂದು ಇಲಾಖೆ ಇದೆಯೇ ಹೇಗೆ ? ಇದೇನಾದರೂ ಒಂದು ಪ್ರೈವೇಟ್ ಪ್ರಾಪರ್ಟಿ ಎಂದೇನಾದರೂ ತಿಳಿದುಕೊಂಡು ಈ ರೀತಿ ಮಾಡುತ್ತಿದ್ದಾರೆಯೇ ಹೇಗೆ ?

† ಶ್ರೀ ವೀರೇಂದ್ರ ಪಾಟೀಲ್.—ಆ ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸಲಾಗಿದೆ. ಅದನ್ನು ಅವರಿಗೆ ವಹಿಸಿದಾಗ ಒಂದು ರೇಟು ಕೊಟ್ಟಿದೆ. 3-4 ಮೈಲಿ ಒಳಗೇ ಇರುವ ಕ್ವಾರಿಯಿಂದ ಕಲ್ಲನ್ನು ತಂದು ಕೆಲಸಮಾಡಬೇಕೆಂದು ಲೀಡ್ ಮತ್ತು ಲಿಫ್ಟ್ ಎಲ್ಲಾ ಅವರಿಗೇ ಒಪ್ಪಿಸಿದ್ದೇವೆ. ಅವರು ಎಲ್ಲಿಂದ ಕಲ್ಲನ್ನು ತಂದರು ಎನ್ನುವ ರೆಕಾರ್ಡು ಸಿಕ್ಕುವುದು ಕಷ್ಟವಾಗಿದೆ.

ಶ್ರೀ ಎಂ. ನಾಗಪ್ಪ.—ಎಷ್ಟು ಮೈಲಿ ದೂರದ ಕ್ವಾರಿಯಿಂದ ಕಲ್ಲನ್ನು ತೆಗೆದುಕೊಂಡು ಬಂದಿದ್ದಾರೆಂಬುದು ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅವರಿಗೆ ಥ್ರೂ ರೇಟ್ ಕೊಟ್ಟಿರುವುದರಿಂದ 3-4 ಮೈಲಿ ಒಳಗೆ ಇರುವ ಕ್ವಾರಿಯಿಂದ ಕಲ್ಲನ್ನು ತಂದು ಹಾಕಿದ್ದಾರೆ.

ಶ್ರೀ ಎಂ. ನಾಗಪ್ಪ.—5 ಮೈಲಿ ಕ್ವಾರಿಯಿಂದ ಕಲ್ಲನ್ನು ತೆಗೆದುಕೊಂಡು ಬಂದಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—5 ಮೈಲಿ ದೂರದಿಂದ ತೆಗೆದುಕೊಂಡು ಬಂದಿರುವ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

Sri D. PARAMESWARAPPA.—May I know the list of quarries where rate has been paid in the Shimoga District?

Sri VEERENDRA PATIL.—I have already said I do not have that information. I do not have those records at all.

1-30 P.M.

ಶ್ರೀ ಎನ್. ಜಿ. ಹಾಲಪ್ಪ.—ಈ ವಿಚಾರದಲ್ಲಿ ತಮಗೆ ಅರ್ಜಿಗಳನ್ನು ಕೂಡ ಕೊಟ್ಟಿದ್ದಾರೆ ಅಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ಪ್ರೈವೇಟ್ ಪಾರ್ಟಿಯಿಂದ ಅವರೂ ಕ್ವಾರಿ ಮಾಡಿ ತಂದಾಗ ಪ್ರೈವೇಟ್ ರಾಯಲ್ಟೀಸ್ ಕೊಟ್ಟು ತೆಗೆದುಕೊಂಡು ಹೋಗಿರಬಹುದು. ನಾವು ಒಂದು ಕೆಲಸ ಒಪ್ಪಿಸಿದ್ದೇವೆ. ಅವರು ಮೂರು ನಾಲ್ಕು ಕಡೆಗಳಿಂದ ತಂದು ಕೆಲಸ ಮಾಡಬಹುದು.

ಶ್ರೀ ಎನ್. ಜಿ. ಹಾಲಪ್ಪ.—ರಿಕಾರ್ಡುಗಳು ಇಲ್ಲವೆಂಬುದು ಅಧಿಕಾರಿಗಳನ್ನು ಮುಚ್ಚಿಡಲಿಕ್ಕೆ ಹೇಳುವುದಲ್ಲವೇ, ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದು ಇಲ್ಲ ಅದರ ಮಾಹಿತಿ ಇಲ್ಲವೆಂದು. ನೀವು ಇದ್ದರೂ ಇಲ್ಲವೆಂದು ಹೇಳುತ್ತಾರೆಂದು ಹೇಳುವುದಕ್ಕೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 50-60 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಈಗ ರಾಯಲ್ಟೀಸ್ ಕೊಡುವುದರಿಂದ ಬಡ ರೈತನಿಗೆ ತುಂಬಾ ಅನುಕೂಲವಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನೂ ಕೊಟ್ಟಿವೆ. ಅದನ್ನು ಕೊಡಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಹತ್ತಿರ ರಿಕಾರ್ಡು ಇಲ್ಲ. ಸರ್ಕಾರದ ಹತ್ತಿರ ರಿಕಾರ್ಡು ಇಲ್ಲವೆ ಇಂಥವನಿಗೆ ಕೊಡಿಸಿ ಕೊಡಿಎಂದರೆ ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ರಿಕಾರ್ಡು ಇದ್ದರೆ ತಾವು ಕೊಡಿಸಿ ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದು ಎಸ್ಟಾಬ್ಲಿಷ್ ಆಗಬೇಕು. ಇಂಥವರ ಜಮೀನಿನಿಂದ ಕ್ವಾರಿ ಮಾಡಿದ್ದಾರೆಂದು. ಇಲ್ಲವಿದ್ದರೆ ಅವರು ಕಲ್ಲು ತಂದು ಹಾಕಿದ್ದಾರೆ, ಇಂಥವರಿಗೆ ರಾಯಲ್ಟೀಸ್ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಎಸ್ಟಾಬ್ಲಿಷ್ ಮಾಡಿದರೆ ಕೊಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಕೋರ್ಟಿಗೆ ಹೋಗಿ ಎಸ್ಟಾಬ್ಲಿಷ್ ಮಾಡಬಹುದು. ಅದಕ್ಕೆ ಟೈಮ್ ಬೇಕಾಗುತ್ತದೆ.

ಉಪಾಧ್ಯಕ್ಷರು.—ಮುಂದಿನ ಪ್ರಶ್ನೆ ನಂ. 20.

Seniority and Transfer of II Division Clerks of Public Works Department

20. Smt. WINNIFRED F. FERNANDES (Coondapur).—

Will the Minister for Public Works be pleased to state.—

(a) whether the seniority of II Division Clerks of the Public Works Department is maintained circlewise as per G. O. No. PWD/SAD 62 dated 21 st July 1962;